# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : **26–01–2018**

## ಪ್ರಕಟಣೆಯ ಕೃಪೆಗಾಗಿ

## ಗಣರಾಜ್ಯೋತ್ಸವ ವೈಭವಯುತ ಆಚರಣೆಗೆ ಮಾತ್ರ ಸೀಮಿತವಾಗಬಾರದು

### ಜೆಎಸ್‌ಎಸ್ ಕಾಲೇಜಿನಲ್ಲಿ ನಡೆದ 69ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಶ್ರೀ ವೆಂಕಟಾಚಲ

**ಕೊಳ್ಳೇಗಾಲ 26–01–2018 :** ಸಂವಿಧಾನ ಜಾರಿಗೊಂಡ ದಿನವನ್ನು ನಾವು ಸಂಭ್ರಮದಿಂದ ಆಚರಿಸುತ್ತೇವೆ. ಈ ದಿನ ಭಾರತೀಯರಾದ ನಮಗೆ ಸಂಭ್ರಮದ ಹಬ್ಬದ ದಿವಸವಾಗಿದೆ. ಆದರೆ ಇದು ಆಚರಣೆಗೆ ಮಾತ್ರ ಸೀಮಿತವಾಗಬಾರದು ಎಂದು ಭಾರತ ವಿಕಾಸ್ ಪರಿಷತ್‌ನ ಕೊಳ್ಳೇಗಾಲದ ನಿಜಗುಣ ಶಾಖೆಯ ಅಧ್ಯಕ್ಷರಾದ ಹಾಗೂ ವಕೀಲರಾದ ಶ್ರೀ ವೆಂಕಟಾಚಲರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 69ನೇ ಗಣರಾಜ್ಯೋತ್ಸವ ಸಂದೇಶ ನೀಡುತ್ತ ಜನರಿಂದ ಜನರಿಗಾಗಿ, ಜನರಿಗೋಸ್ಕರ ಎನ್ನುವ ಅಬ್ರಹಾಂ ಲಿಂಕನ್‌ನವರ ಪರಿಕಲ್ಪನೆಯ ಪೂರ್ಣ ಸ್ವರಾಜ್ಯ ಭಾರತದಲ್ಲಿ ಸಾಕಾರಗೊಳಿಸಲು ಶ್ರಮಿಸಿದ ಮಾರ್ಗ ಕಡಿಮೆಯಲ್ಲ. ಇದಕ್ಕಾಗಿ ಸಾವಿರಾರು ಮಂದಿ ತ್ಯಾಗ ಮತ್ತು ಬಲಿದಾನ ಮಾಡಬೇಕಾಯಿತು. ಅವರನ್ನು ಇಂದು ನಾವು ಸ್ಮರಿಸಿಕೊಳ್ಳಬೇಕು ಹಾಗೂ ಸಂವಿಧಾನ ನೀಡಿದ ಪ್ರತಿಯೊಬ್ಬರ ಆಶಯದಂತೆ ನಡೆದುಕೊಳ್ಳುವುದು ನಮ್ಮೆಲ್ಲರ ಗುರಿಯಾಗಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯರು ಲಕ್ಷಾಂತರ ಭಾರತೀಯರ ಹೋರಾಟದ ಫಲವಾಗಿ ಭಾರತ ಸ್ವಾತಂತ್ರ ಗಳಿಸಿ 70 ವರ್ಷಗಳಾಗಿವೆ. ಪ್ರಪಂಚದಲ್ಲೇ ಶ್ರೇಷ್ಠವೆನಿಸಿದ ಸಂವಿಧಾನ ನಮಗೆ ಲಭಿಸಿ 68 ವರ್ಷಗಳಾಗಿವೆ. ಆದರೆ ಜನತಾಂತ್ರಿಕತೆ, ಅತಿರೇಕ, ಸ್ವೇಚ್ಛಾಚಾರ ಈ ದೇಶವನ್ನು ಹಳಿ ತಪ್ಪಿಸುತ್ತಿದೆ ಎಂಬುದು ವಿಪರ್ಯಾಸವೇ ಸರಿ. ವಾಸ್ತವಿಕವಾಗಿ ಒಂದು ದೇಶ ಒಂದು ಚುನಾವಣೆ ಸರ್ಕಾರದ ರಾಷ್ಟ್ರೀಯ ನೀತಿ ಆಗಬೇಕು. ಸಂವಿಧಾನ ಜಾರಿಗೊಂಡ ನಂತರ ಕೇವಲ ನಾಲ್ಕು ಚುನಾವಣೆಗಳು ಮಾತ್ರ ಒಟ್ಟಿಗೆ ನಡೆದವು. ನಂತರ ಈ ಪ್ರಕ್ರಿಯೆಯ ತಾಳಮೇಳ ಪೂರ್ಣ ತಪ್ಪಿತು. ಪ್ರತೀ ವರ್ಷ ಒಂದಲ್ಲ ಒಂದು ಚುನಾವಣೆ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಅಭಿವೃದ್ಧಿ ಗಗನ ಕುಸುಮವಾಗಿದೆ. ರಾಷ್ಟ್ರೀಯ ಹಬ್ಬಗಳಾದ ಇಂತಹ ಸಂದರ್ಭದಲ್ಲಿ ನಾವು ಈ ದಿಶೆಯಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ರಾಜ್ಯಶಾಸ್ತ್ರ ವಿಭಾಗ ಮುಖ್ಯಸ್ಥರಾದ ಶ್ರೀ ಕೆ ಆರ್ ಗುರುಪ್ರಸಾದ್, ಜೆಎಸ್‌ಎಸ್ ನರ್ಸಿಂಗ್ ಶಾಲೆ ಪ್ರಾಚಾರ್ಯ ಶ್ರೀ ವಿಷಕಂಠಮೂರ್ತಿ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಎನ್ ಮಹದೇವಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರು ಗಣರಾಜ್ಯೋತ್ಸವ ಕುರಿತು ಮಾತನಾಡಿದರು. ಕು. ಕಾವ್ಯ ಸ್ವಾಗತಿಸಿದರು ಹಾಗೂ ಕು.ಗೀತಾ ವಂದಿಸಿದರು. ಕು. ಅಂಜನರವರು ಕಾರ್ಯಕ್ರಮವನ್ನು ನಿರೂಪಿಸಿದರು.

**69ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಶ್ರೀ ವೆಂಕಟಾಚಲರವರು ಗಣರಾಜೋತ್ಸವ ಸಂದೇಶ ನೀಡುತ್ತಿರುವುದು.**

**ಚಿತ್ರದಲ್ಲಿ ಶ್ರೀ ವಿಷಕಂಠಮೂರ್ತಿ, ಶ್ರೀ ಎನ್ ಮಹದೇವಸ್ವಾಮಿ, ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಶ್ರೀ ಕೆ ಆರ್ ಗುರುಪ್ರಸಾದ್‌ರವರನ್ನು ಕಾಣಬಹುದು.**




**69ನೆಯ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಎಲ್ಲಾ ನೌಕರರು ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು.**

